

ಚಿರೇಕಲ್ಲಿನಂಥ ಗುಡ್ಡದ ಮೇಲೆ ಮನೆ. ಸುತ್ತ 150 ಅಡಿಕೆ, ಬಾಳೆ ಸಸಿಗಳು. ಬೇಸಿಗೆ ವೇಳೆ ಗಿಡಗಳು ಸತುವು ಕಳೆದುಕೊಂಡು ಇನ್ನೇನು ಸಾಯುವ ಸ್ಥಿತಿ ತಂದೊಡ್ಡುವಂತಹ ಬಿಸಿಲು. ಮನೆ ಮಕ್ಕಳಿಗೆ ಅನಾರೋಗ್ಯ ಕಾಡುವಾಗ, ದೂರದಿಂದ ನೀರು ಹೊತ್ತು ತಂದು ಗಿಡಗಳನ್ನು ಬದುಕಿಸಿಕೊಳ್ಳುವುದು ಹೇಗೆ? ನೀರಿಗೆ ಕಾಸು ಕೊಡಲು ಹೆಚ್ಚಿನ ಶಕ್ತಿಯಿರಲಿಲ್ಲ. ಹೀಗಾಗಿ ಮನಸ್ಸು ಗಟ್ಟಿ ಮಾಡಿ ಮನೆ ಹಿಂಭಾಗದಲ್ಲಿ ಎಂಟು ಅಡಿ ಅಗಲ, ಅರವತ್ತು ಅಡಿ ಆಳದ ಬಾವಿಯನ್ನು ಒಬ್ಬರೇ ತೋಡಿ ದಿಟ್ಟತನ ಮೆರೆದರು. ಎರಡು ತಿಂಗಳ ಕಾಲ ಮನೆಯ ಹಿಂಬದಿಯ ತೋಟದಲ್ಲಿ ಯಾರಿಗೂ ತಿಳಿಯದಂತೆ ಬಾವಿ ತೋಡುವ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಕೊನೆಯ ದಿನ ಕೆಸರು ಮಣ್ಣನ್ನು ಹೊರತೆಗೆಯುವ ಸಂದರ್ಭದಲ್ಲಿ ಎಲ್ಲರಿಗೂ ತಿಳಿಸಿದಾಗ, ಅಕ್ಕಪಕ್ಕದವರು ಮೂಗಿನ ಮೇಲೆ ಬೆರಳಿಟ್ಟರು. 'ಈ ವಯಸ್ಸಿನಲ್ಲಿ ಬಾವಿ ಅಗೆಯುವ ಉಸಾಬರಿ ಏಕೆ' ಎಂದು ಮಗ ಬೈಯುತ್ತಾನೆ ಎಂಬ ಕಾರಣಕ್ಕೆ ಅವರು ತಮ್ಮ ಕೆಲಸದ ಬಗ್ಗೆ ಯಾರಿಗೂ ತಿಳಿಸಿರಲಿಲ್ಲವಂತೆ.

ಬಾವಿ ತೆಗೆಯುವುದಕ್ಕೆ ಸಾಮಾನ್ಯವಾಗಿ ಮೂರ್ನಾಲ್ಕು ಜನ ಬೇಕು. ಇಬ್ಬರು ಬಾವಿಯ ಮಣ್ಣೆತ್ತಲು, ಇನ್ನಿಬ್ಬರು ಬಾವಿ ತೋಡಲು. ಗೌರಿ, ಮಣ್ಣನ್ನು ಅಗೆದು, ಅದನ್ನು ತಾವೊಬ್ಬರೇ ಮೇಲೆ ತಂದು ಹೊರಕ್ಕೆ ಸುರಿದು, ಮತ್ತೆ ಬಾವಿಗೆ ಇಳಿಯುತ್ತಿದ್ದರು. ದಿನಕ್ಕೆ 200ಕ್ಕೂ ಹೆಚ್ಚು ಬಾರಿ ಬಾವಿ ಹತ್ತಿಳಿಯುತ್ತಲೇ ಈ ಕೆಲಸ ನಿರ್ವಹಿಸಿದ್ದಾರೆ. ಗೌರಿ ಅವರ ಎರಡು ತಿಂಗಳ ಬೆವರ ಹನಿಯ ಪ್ರತಿಫಲವಾಗಿ 60 ಅಡಿ ಆಳದ ಬಾವಿಯಲ್ಲಿ 7 ಅಡಿ ಜೀವಜಲ ಸದಾ ತುಂಬಿರುತ್ತದೆ. ವಿಶೇಷ ಎಂದರೆ ಈ ವಯಸ್ಸಿನಲ್ಲೂ ಬಾವಿ ಹತ್ತಿಳಿಯಲು ಅವರಿಗೆ ಮೂರು ನಿಮಿಷ ಸಾಕು!

ಕೋವಿಡ್ ಕಾರಣದಿಂದ ಲಾಕ್‌ಡೌನ್ ಘೋಷಣೆ ಮಾಡಿದಾಗ ಗೌರಿಗೆ ಹೆಚ್ಚಿನ ದುಡಿಮೆ ಇರಲಿಲ್ಲ. ತಮ್ಮ ಮನೆಯ ಬಳಿ ಇರುವ ಅಡಿಕೆ ತೋಟಕ್ಕೆ ಈಗಾಗಲೇ ನೀರಾವರಿ ವ್ಯವಸ್ಥೆಯಾಗಿದೆ. ಮನೆಮಂದಿಗೆ ಶುದ್ಧ ನೀರು ಬೇಕಿದೆ. ಅದಕ್ಕೆ ಸಮಸ್ಯೆ ಆಗಬಾರದು ಎಂದು ಇನ್ನೊಂದು ಬಾವಿ ತೋಡಲು ಮುಂದಾದರು. ಅದಕ್ಕಾಗಿ ಮನೆಯ ಹಿಂಭಾಗದಲ್ಲಿದ್ದ ಗುಡ್ಡವನ್ನು ಸುಮಾರು 16 ಅಡಿ ನೆಲ ಸಮತಟ್ಟು ಮಾಡಿದರು. ಅಲ್ಲಿ ಸಿಕ್ಕ ಮಣ್ಣನ್ನು ಮನೆಬಳಿಯೇ ಇರುವ ಅಡಿಕೆ ತೋಟಕ್ಕೆ ತಂದು ಹಾಕಿದರು. ಬಳಿಕ ಮತ್ತೊಂದು ಬಾವಿ ತೋಡಲು ಆರಂಭಿಸಿದರು. ನಿರಂತರವಾಗಿ ಏಕಾಂಗಿ ಕಾಯಕ. ಐದು ಅಡಿ ಅಗಲ, 60 ಅಡಿ ಆಳದ ಬಾವಿ ರೆಡಿ. ಅಲ್ಲಿ ನೀರೂ ಉಕ್ಕಿ ಹರಿಯಿತು.

'ಇನ್ನು ಬಾವಿ ತೋಡುವುದು ಸಾಕು' ಎಂದು ಐದು ವರ್ಷ ಸುಮ್ಮನಿದ್ದರು. ಆದರೆ ಈ ಏಕಾಂಗಿ ಸಾಹಸಕ್ಕೆ ಪ್ರಚಾರ ದೊರೆತಿತ್ತು. ಸನ್ಮಾನ, ಗೌರವಗಳು ತಾವಾಗಿಯೇ ಹುಡುಕಿ ಬಂದವು. ಆಗ ಗೌರಕ್ಕನ ಮನಸ್ಸಲ್ಲಿ ತಾನು ಈ ಸನ್ಮಾನಗಳಿಗೆ ಯೋಗ್ಯಳಲ್ಲ ಎಂಬ ಭಾವನೆ ಬಂತು. ಯಾಕೆಂದರೆ, ಎರಡೂ ಬಾವಿಗಳನ್ನು ತನ್ನ ಸ್ವಂತದ ಬಳಕೆಗೆಂದು ತೋಡಿದ್ದು. ಇದರಲ್ಲಿ ಸನ್ಮಾನ ಮಾಡಿಸಿಕೊಳ್ಳುವಂಥದ್ದು ಏನಿದೆ ಎಂಬ ಪ್ರಶ್ನೆ ಅವರದ್ದು. ಊರಿನ ಅಂಗನವಾಡಿಯಲ್ಲಿ ನೀರಿನ ವ್ಯವಸ್ಥೆ ಇಲ್ಲದೇ ಇರುವುದರಿಂದ, ಪುಟಾಣಿ ಮಕ್ಕಳಿಗಾಗಿ ಒಂದು ಬಾವಿ ತೋಡಬೇಕು ಎಂಬ ಸಂಕಲ್ಪ ಮಾಡಿಕೊಂಡರು.

ತಮ್ಮದೇ ಮೊಮ್ಮಕ್ಕಳು ಹೋಗುವ ಅಂಗನವಾಡಿಯಲ್ಲಿ ನೀರಿನ ಕೊರತೆ. ಸಮೀಪದ ಹುತ್ಗಾರ ಗ್ರಾಮ ಪಂಚಾಯಿತಿಯಿಂದ ಆಗೊಮ್ಮೆ ಈಗೊಮ್ಮೆ ಬರುವ ನೀರು. ಶಿಕ್ಷಕಿಗೆ ದೂರದ ಬಾವಿಯಿಂದ ಕೊಡ ಹೊತ್ತು ನೀರು ತರುವ ಶಿಕ್ಷೆ. ಮೊಮ್ಮಗನನ್ನು ನಿತ್ಯ ಬಿಡಲು ಹೋದ ಗೌರಿ ಮನಸ್ಸಿಗೆ ಬಂದ ಯೋಚನೆಯೊಂದೇ – ಅಲ್ಲೊಂದು ಬಾವಿ ತೋಡುವುದು!

ತಡಮಾಡದೆ ಹಿಡಿದಿದ್ದು ಮನೆಯ ಮೂಲೆಯಲ್ಲಿ ಪೇರಿಸಿಟ್ಟ ಪಿಕಾಸಿ, ಗುದ್ದಲಿ, ಹಾರೆ, ಬುಟ್ಟಿ. ಮಾರನೇ ದಿನ ಶಿಕ್ಷಕಿ, ಪಂಚಾಯಿತಿ ಮುಖ್ಯಸ್ಥರ ಬಳಿ ಮಾತುಕತೆ ನಡೆಸಿದರು. ಅದರ ಮರುದಿನ ಬೆಳ್ಳಂಬೆಳಿಗ್ಗೆ ಅಂಗನವಾಡಿ ಹಿಂದೆ ಜಾಗ ಗುರುತು ಮಾಡಿ ಭೂಮಿ ಅಗೆತ ಆರಂಭಿಸಿದರು. ಸೂರ್ಯ ನೆತ್ತಿಯೇರುವ ಮುನ್ನವೇ ಮೂರಡಿ ಆಳದಲ್ಲಿ ಗೌರಿಯ ಪಿಕಾಸಿಯ ಅಗೆತದ ಸದ್ದು ಕೇಳುತ್ತಿತ್ತು. ವಾರ ಕಳೆಯುವುದರಲ್ಲಿ 15 ಅಡಿ ತೋಡಿದಾಗ, ಒಂದು ಅಡಚಣೆ ಎದುರಾಯಿತು.

ಬಾವಿ ತೋಡಲು ಇಲಾಖೆಗಳಿಂದ ಬಾವಿ ಅನುಮತಿ ಪಡೆದಿಲ್ಲ ಎಂಬ ತೊಡಕು ಎದುರಾಯಿತು. ಕಿಂಚಿತ್ ಹಣ ಪಡೆಯದೆ, ಯಾವೊಂದೂ ಸ್ವಾರ್ಥವಿಲ್ಲದೇ ನೀರುಣಿಸಲು ಮುಂದೆ ಬಂದ ಮಹಿಳೆಗೆ ತೊಂದರೆ ಆಗುತ್ತಿರುವುದನ್ನು ಗಮನಿಸಿದ ಗ್ರಾಮಸ್ಥರು ಸಹಕಾರ ನೀಡಿ ಬೆಂಬಲಕ್ಕೆ ನಿಂತರು. ಅಲ್ಲಿಗೆ ಗೌರಿಯ ಉತ್ಸಾಹ ನೂರ್ಮಡಿಸಿತ್ತು. ಈ ಬಾವಿಯೂ 60 ಅಡಿ ಆಳ ಕಾಣಲಿದೆ. ಗೌರಮ್ಮನ ಸಾಹಸಕ್ಕೆ ಗಂಗಾವತರಣ ಆಗದಿರುವುದೆ?

'ನನ್ನ ಸಹೋದ್ಯೋಗಿಗಳು ಎಂದರೆ ಅವು ಗುದ್ದಲಿ, ಬಕೆಟ್, ಹಗ್ಗ, ಪಿಕಾಸಿ, ಹಾರೆ' ಎನ್ನುವ ಗೌರಿ ನಾಯ್ಕ, 'ಬಾವಿ ತೋಡುವ ಕೆಲಸ ಪುರುಷರಿಗೆ ಮಾತ್ರ ಸೀಮಿತವಲ್ಲ. ದೈಹಿಕ ಸಾಮರ್ಥ್ಯ, ಛಲವಿದ್ದರೆ ಮಹಿಳೆಯರೂ ಈ ಕೆಲಸವನ್ನು ಮಾಡಬಹುದು. ಈ ಹಿಂದೆ ನಿತ್ಯ ಆರೆಂಟು ತಾಸು ಕೆಲಸ ಮಾಡಿ ಬಾವಿ ತೆಗೆದಿದ್ದೆ. ಆಗ ತೋಡಿದ ಬಾವಿಯಲ್ಲಿ ಈಗಲೂ ಏಳು ಅಡಿ ನೀರು ಇದೆ. ನನ್ನ ತೋಟದ ಗಿಡಗಳಿಗೆ ಈ ನೀರೇ ಆಸರೆಯಾಗಿದೆ. ಅದೇ ರೀತಿ ಅಂಗನವಾಡಿ ಹಿಂಭಾಗ ನಾನೇ ಜಾಗ ಹುಡುಕಿಕೊಂಡು ತೆಗೆಯುತ್ತಿರುವ ಬಾವಿಯಲ್ಲಿ ನೀರು ಬಂದರೆ ಅದಕ್ಕಿಂತ ಖುಷಿ ಬೇರೊಂದಿಲ್ಲ' ಎನ್ನುತ್ತಾರೆ.

ನೀರು ಪೋಲು ಮಾಡುವಲ್ಲಿ ನಾವೆಲ್ಲ ನಿಸ್ಸೀಮರು. ಆದರೆ, ನೀರನ್ನು ಜತನಗೊಳಿಸುವ ಹಾಗೂ ನೀರಿನ ಆಸರೆಗಳನ್ನು ಒದಗಿಸುವ ಗೌರಮ್ಮನಂಥವರು, ಕೇವಲ ತಮ್ಮ ಕುಟುಂಬಕ್ಕೆ ಮಾತ್ರವಲ್ಲ, ಇಡೀ ಸಮಾಜಕ್ಕೆ ಅಮ್ಮಂದಿರು. ಇಂಥ ತಾಯಂದಿರ ಕಾಳಜಿಯೇ ಊರು– ಕೇರಿಗಳನ್ನು ಪೊರೆಯುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in